# ದಿನಾಂಕ: 24-09-2011ರಂದು ಪೂರ್ವಾಹ್ನ: 11-00 ಗಂಟೆಗೆ ಉಪಾಧ್ಯಕ್ಷರ ಕೊಠಡಿ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀ ಬಿ.ಆರ್.ಸತ್ಯನಾರಾಯಣ
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ

ಹಾಜರಿ:05

ಗೈರು ಹಾಜರಿ:02

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಉಪ ಕಾರ್ಯದರ್ಶಿ(ಆಡಳಿತ)ರವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು. | |
| 1 | 2011-12ನೇ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಮಾಡಲು ಬಳಸಿದ ವಿವಿಧ ಬಟ್ಟೆಗಳನ್ನು ತೊಳೆಸಲು ಮಂಜೂರಾತಿ ನೀಡುವ ಬಗ್ಗೆ. | 2011-12ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ಇವರ ಕಛೇರಿಯ ಕುಟುಂಬ ಕಲ್ಯಾಣ ಬ್ಯೂರೋ ವಿಭಾಗದಿಂದ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗಳನ್ನು ಮಾಡಲು ಬಳಸಿದ ಕೊಳೆಯಾದ ವಿವಿಧ ಬಟ್ಟೆಗಳನ್ನು ತೊಳೆಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾಸನ ಇವರು ದರಪಟ್ಟಿ ಕರೆದು, ತುಲನಾತ್ಮಕ ದರಪಟ್ಟಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿ, ದರಪಟ್ಟಿ ಸಲ್ಲಿಸಿದ 3 ಸಂಸ್ಥೆಗಳ ಪೈಕಿ ಅನ್ನಪೂರ್ಣೇಶ್ವರಿ, ಹೆಚ್.ವಿ ಬಿನ್ ಹೆಚ್.ಡಿ. ವೆಂಕಟೇಶ್, ಕುಂಬಾರ ಬೀದಿ, ಹಾಸನ ಇವರು ಸೂಚಿಸಿದ ದರವು ಕಡಿಮೆ ಇರುವ ಕಾರಣ, ಇವರಿಂದ, ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಬಳಸಿದ ಬಟ್ಟೆಗಳನ್ನು ಒಗೆಸಲು ಅನುಮತಿ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ ಹಾಗೂ ಈ ಸಂಬಂಧ ವೆಚ್ಚವನ್ನು ಲೆಕ್ಕಶೀರ್ಷಿಕೆ 2210-00-106-0-01 ರಡಿಯಲ್ಲಿ ಭರಿಸುವುದಾಗಿ ಮತ್ತು ಈ ಕಾರ್ಯಕ್ಕೆ ವಾರ್ಷಿಕವಾಗಿ ಅಂದಾಜು ರೂ.50000/-ಗಳ ವೆಚ್ಚ ತಗಲುವುದೆಂದು ತಿಳಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳವರು ಕೋರಿರುವಂತೆ 2011-12ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ಇವರ ಕಛೇರಿಯ ಕುಟುಂಬ ಕಲ್ಯಾಣ ಬ್ಯೂರೋ ವಿಭಾಗದಿಂದ ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗಳನ್ನು ಮಾಡಲು ಬಳಸಿದ ಕೊಳೆಯಾದ ವಿವಿಧ ಬಟ್ಟೆಗಳನ್ನು ಕಡಿಮೆ ದರ ಸೂಚಿಸಿರುವ ಅನ್ನಪೂರ್ಣೇಶ್ವರಿ ಹೆಚ್.ವಿ ಬಿನ್ ಹೆಚ್.ಡಿ.ವೆಂಕಟೇಶ್, ಕುಂಬಾರಬೀದಿ, ಹಾಸನ ಇವರಿಂದ ಒಗೆಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 2 | 2011-12ನೇ ಸಾಲಿಗೆ ಆಯುಷ್ ವೈದ್ಯಪದ್ಧತಿಗಳ ಔಷಧಿಗಳನ್ನು ಖರೀದಿಸಿ ಸರಬರಾಜು ಮಾಡುವ ಬಗ್ಗೆ. | 2011-12ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-00-101-0-37 ಆಯುಷ್ ಇಲಾಖೆಯ ಔಷಧಿ ಮತ್ತು ರಾಸಾಯನಿಕಗಳು (ಯೋಜನೇತರ) ಲೆಕ್ಕಶೀರ್ಷಿಕೆಯಡಿಯಲ್ಲಿ ನಿಗದಿಯಾಗಿರುವ ಅನುದಾನ ರೂ.31,35,000.00(ರೂಪಾಯಿ ಮೂವತ್ತೊಂದು ಲಕ್ಷದ ಮೂವತ್ತೈದು ಸಾವಿರ ಮಾತ್ರ)ಗಳ ಮೊತ್ತದಲ್ಲಿ ಶೇ.60ರಷ್ಟು ಮೊತ್ತಕ್ಕೆ ಸರ್ಕಾರಿ ಕೇಂದ್ರೀಯ ಔಷಧಾಗಾರ ಬೆಂಗಳೂರು ಹಾಗೂ ಉಳಿದ ಶೇ.40ರಷ್ಟು ಮೊತ್ತಕ್ಕೆ ಉಪ ನಿರ್ದೇಶಕರು, (ಆಯುರ್ವೇದ) ಆಯುರ್ವೇದ, ಯೋಗ ಮತ್ತು ನ್ಯಾಚುರೋಪತಿ ಯುನಾನಿ ಸಿದ್ದ ಮತ್ತು | ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.<br>2011-12ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-00-101-0-37 ಆಯುಷ್ ಇಲಾಖೆಯ ಔಷಧಿ ಮತ್ತು ರಾಸಾಯನಿಕಗಳು (ಯೋಜನೇತರ) ಲೆಕ್ಕಶೀರ್ಷಿಕೆಯಡಿಯಲ್ಲಿ ನಿಗದಿಯಾಗಿರುವ ಅನುದಾನದಲ್ಲಿ ಶೇ.40 ರಷ್ಟು ಅನುದಾನದಲ್ಲಿ ಕೆಳಕಂಡ ಸಂಸ್ಥೆಗಳ ವತಿಯಿಂದ ಹಾಸನ |

2

| | | | |
|---|---|---|---|
| | | ಹೋಮಿಯೋಪತಿ(ಆಯುಷ್) ನಿರ್ದೇಶನಾಲಯ, ಬೆಂಗಳೂರು ಇವರು ಸೂಚಿಸಿರುವ ಈ ಕೆಳಕಂಡ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಔಷದಿ ಮತ್ತು ರಾಸಾಯನಿಕಗಳನ್ನು ಖರೀದಿಸಿ ಹಾಸನ ಜಿಲ್ಲೆಯ ಆಯುಷ್ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 56 ಆಯುರ್ವೇದ, 5 ಯುನಾನಿ, 2 ಹೋಮಿಯೋಪತಿ ಆಸ್ಪತ್ರೆ/ ಚಿಕಿತ್ಸಾಲಯಗಳಿಗೆ ಸರಬರಾಜು ಮಾಡಲು ಅನುಮತಿ ನೀಡುವಂತೆ ಜಿಲ್ಲಾ ಆಯುಷ್ ಅಧಿಕಾರಿಗಳು, ಹಾಸನ ಇವರು ಕೋರಿರುತ್ತಾರೆ.<br>ಸರ್ಕಾರಿ ಸಂಸ್ಥೆಗಳ ವಿವರ ಕೆಳಕಂಡಂತಿವೆ.<br>1. ಐಎಂಪಿಸಿಎಲ್ ಆಲ್‌ಮೋರಾ, ಉತ್ತರಖಂಡ, ಆಯುರ್ವೇದ ಡ್ರಗ್ಸ್ (ಕೇಂದ್ರ ಸರ್ಕಾರಿ ಸಂಸ್ಥೆ)<br>2. ಎಂಪಿ ಮೈನರ್ ಫಾರೆಸ್, ಮಧ್ಯಪ್ರದೇಶ, ಆಯುರ್ವೇದ ಡ್ರಗ್ಸ್ ( ಮಧ್ಯಪ್ರದೇಶ ಸರ್ಕಾರಿ ಸಂಸ್ಥೆ)<br>3. ಔಷಧೀಸ್, ಕೇರಳ, ಆಯುರ್ವೇದ ಡ್ರಗ್ಸ್ (ಕೇರಳ ಸರ್ಕಾರಿ ಸಂಸ್ಥೆ)<br>ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಔಷಧಿಗಳು ಬಂದ ನಂತರ ಸಮಿತಿಯ ಸದಸ್ಯರುಗಳ ಗಮನಕ್ಕೆ ತರಲು ಕ್ರಮ ವಹಿಸಬೇಕೆಂದು ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ತಿಳಿಸಿದರು.<br>ಮಾನ್ಯ ಸಮಿತಿ ಸದಸ್ಯರುಗಳು ಶೇ.40ರಷ್ಟು ಅನುದಾನದಲ್ಲಿ ಜಿಲ್ಲಾ ಪಂಚಾಯಿತಿ ವತಿಯಿಂದ ಟೆಂಡರ್ ಕರೆದು, ಸ್ಥಳೀಯವಾಗಿ ಅವಶ್ಯವಿರುವ ಔಷಧಿಗಳನ್ನು ಖರೀದಿಸಲು ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಪ್ರಸ್ತವನೆಯನ್ನು ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. | ಜಿಲ್ಲೆಯ ಆಯುಷ್ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 56 ಆಯುರ್ವೇದ, 5 ಯುನಾನಿ, 2 ಹೋಮಿಯೋಪತಿ ಆಸ್ಪತ್ರೆ/ ಚಿಕಿತ್ಸಾಲಯಗಳಿಗೆ ಅವಶ್ಯ ಔಷಧಿಗಳನ್ನು ಖರೀದಿಸಿ ಸರಬರಾಜು ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>1. ಐಎಂಪಿಸಿಎಲ್ ಆಲ್‌ಮೋರಾ, ಉತ್ತರಖಂಡ, ಆಯುರ್ವೇದ ಡ್ರಗ್ಸ್ (ಕೇಂದ್ರ ಸರ್ಕಾರಿ ಸಂಸ್ಥೆ)<br>2. ಎಂಪಿ ಮೈನರ್ ಫಾರೆಸ್, ಮಧ್ಯಪ್ರದೇಶ, ಆಯುರ್ವೇದ ಡ್ರಗ್ಸ್ ( ಮಧ್ಯಪ್ರದೇಶ ಸರ್ಕಾರಿ ಸಂಸ್ಥೆ)<br>3. ಔಷಧೀಸ್, ಕೇರಳ, ಆಯುರ್ವೇದ ಡ್ರಗ್ಸ್ (ಕೇರಳ ಸರ್ಕಾರಿ ಸಂಸ್ಥೆ) |
| 3 | ಸಮುದಾಯ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳಿಗೆ ಪಥ್ಯಾಹಾರ ಸರಬರಾಜು ಮತ್ತು ಅಗತ್ಯ ವಸ್ತುಗಳ ಸರಬರಾಜು ಮಾಡುವ ಬಗ್ಗೆ. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ತಮ್ಮ ಪತ್ರ ಸಂಖ್ಯೆ: ಲೆಕ್ಕ(2)40/11-12 ದಿನಾಂಕ: 24-09-2011ರಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ಸಮುದಾಯ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳಿಗೆ ಅವಶ್ಯ ಪಥ್ಯಾಹಾರ ಮತ್ತು ಅಗತ್ಯ ವಸ್ತುಗಳ ಸರಬರಾಜಿಗೆ ಸಂಬಂಧಿಸಿದಂತೆ, ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಿದ ಟೆಂಡರ್‌ದಾರರು ನಮೂದಿಸಿರುವ ದರಗಳನ್ನು ಪರಿಶೀಲಿಸಿ ತುಲನಾತ್ಮಕ ದರಪಟ್ಟಿಯನ್ನು ಸಿದ್ದಪಡಿಸಿ, ಅತೀ ಕಡಿಮೆ ದರ ನಮೂದಿಸಿರುವ ಸಂಸ್ಥೆಗಳಿಂದ ಅವಶ್ಯ ಪಥ್ಯಾಹಾರ ಮತ್ತು ಅಗತ್ಯ ವಸ್ತುಗಳನ್ನು ಸರಬರಾಜು ಮಾಡಲು ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಕೋರಿರುವಂತೆ 2011-12ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ಸಮುದಾಯ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳಿಗೆ ಅವಶ್ಯ ಪಥ್ಯಾಹಾರ ಮತ್ತು ಅಗತ್ಯ ವಸ್ತುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮಗಳ ಪ್ರಕಾರ ಕಡಿಮೆ ದರ |

<table>
<tr>
<td></td>
<td></td>
<td>ಟೆಂಡರ್‌ನಲ್ಲಿ ಕಡಿಮೆ ದರ ನಮೂದಿಸಿರುವ ಸಂಸ್ಥೆಗಳ ವಿವರ ಕೆಳಕಂಡಂತಿರುತ್ತದೆ.
<table>
<tr><th>ಕ್ರಸಂ</th><th>ಸಂಸ್ಥೆಯ ವಿವರ</th><th>ಕಡಿಮೆ ದರ ನಮೂದಿಸಿರುವ ಟೆಂಡರ್‌ದಾರರ ವಿವರ</th></tr>
<tr><td>1</td><td>ಸ.ಆ.ಕೇಂ. ಕೊಣನೂರು</td><td>ಇಂಡಿಯನ್ ಎಂಪ್ಲಾಯ್‌ಮೆಂಟ್ ಬ್ಯೂರೋ, ಹಾಸನ.</td></tr>
<tr><td>2</td><td>ಸ.ಆ.ಕೇಂ. ಹಳ್ಳಿಮೈಸೂರು</td><td>ಜಗದೀಶ್ ಟ್ರೇಡರ್ಸ್, ಅರಸೀಕೆರೆ</td></tr>
<tr><td>3</td><td>ಸ.ಆ.ಕೇಂ. ಹಿರೀಸಾವೆ</td><td>ಬಿ.ಎನ್.ಲಿಂಗೇಶ್, ವಿನಾಯಕ ನಗರ, ಹಾಸನ.</td></tr>
<tr><td>4</td><td>ಸ.ಆ.ಕೇಂ. ಶ್ರವಣಬೆಳಗೊಳ</td><td>ಶಾರದಮ್ಮ ಕೋಂ ಅಪ್ಪಾಜಿಗೌಡ, ಹೊಸಹಳ್ಳಿ, ಚನ್ನರಾಯಪಟ್ಟಣ ತಾ:</td></tr>
<tr><td>5</td><td>ಸಾರ್ವಜನಿಕ ಆಸ್ಪತ್ರೆ, ಆಲೂರು</td><td>ಕೃಷ್ಣ ಎಂಟರ್‌ಪ್ರೈಸಸ್, ಹಾಸನ</td></tr>
<tr><td>6</td><td>ಸಾರ್ವಜನಿಕ ಆಸ್ಪತ್ರೆ, ಬೇಲೂರು</td><td>ಭವಾನಿ, ಸೆಕ್ಯೂರಿಟಿ ಏಜನ್ಸೀಸ್, ಹಾಸನ</td></tr>
</table>
</td>
<td>ನಮೂದಿಸಿರುವ ಕೆಳಕಂಡ ಸಂಸ್ಥೆಗಳಿಂದ ಸರಬರಾಜು ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.
<table>
<tr><th>ಕ್ರಸಂ</th><th>ಸಂಸ್ಥೆಯ ವಿವರ</th><th>ಕಡಿಮೆ ದರ ನಮೂದಿಸಿರುವ ಟೆಂಡರ್‌ದಾರರ ವಿವರ</th></tr>
<tr><td>1</td><td>ಸ.ಆ.ಕೇಂ. ಕೊಣನೂರು</td><td>ಇಂಡಿಯನ್ ಎಂಪ್ಲಾಯ್‌ಮೆಂಟ್ ಬ್ಯೂರೋ, ಹಾಸನ.</td></tr>
<tr><td>2</td><td>ಸ.ಆ.ಕೇಂ. ಹಳ್ಳಿಮೈಸೂರು</td><td>ಜಗದೀಶ್ ಟ್ರೇಡರ್ಸ್, ಅರಸೀಕೆರೆ</td></tr>
<tr><td>3</td><td>ಸ.ಆ.ಕೇಂ. ಹಿರೀಸಾವೆ</td><td>ಬಿ.ಎನ್.ಲಿಂಗೇಶ್, ವಿನಾಯಕ ನಗರ, ಹಾಸನ.</td></tr>
<tr><td>4</td><td>ಸ.ಆ.ಕೇಂ. ಶ್ರವಣಬೆಳಗೊಳ</td><td>ಶಾರದಮ್ಮ ಕೋಂ ಅಪ್ಪಾಜಿಗೌಡ, ಹೊಸಹಳ್ಳಿ, ಚ.ರಾ.ಪಟ್ಟಣ ತಾ:</td></tr>
<tr><td>5</td><td>ಸಾರ್ವಜನಿಕ ಆಸ್ಪತ್ರೆ,ಆಲೂರು</td><td>ಕೃಷ್ಣ ಎಂಟರ್‌ಪ್ರೈಸಸ್, ಹಾಸನ</td></tr>
<tr><td>6</td><td>ಸಾರ್ವಜನಿಕ ಆಸ್ಪತ್ರೆ, ಬೇಲೂರು</td><td>ಭವಾನಿ, ಸೆಕ್ಯೂರಿಟಿ ಏಜನ್ಸೀಸ್, ಹಾಸನ</td></tr>
</table>
</td>
</tr>
<tr>
<td>4</td>
<td>2011-12ನೇ ಸಾಲಿಗೆ ಪೀಠೋಪಕರಣಗಳು, ಪಂಚಕರ್ಮ ಉಪಕರಣಗಳು ಮತ್ತು ಆಸ್ಪತ್ರೆ ಪರಿಕರಗಳನ್ನು ಖರೀದಿಸುವ ಬಗ್ಗೆ.</td>
<td>ಜಿಲ್ಲಾ ಆಯುಷ್ ಅಧಿಕಾರಿ, ಹಾಸನ ಇವರು ತಮ್ಮ ಪತ್ರ ಸಂಖ್ಯೆ: ಜಿ.ಆ.ಅ.ಹಾ: ಸಿಬ್ಬಂದಿ/45/2011-12 ದಿನಾಂಕ: 20-09-2011ರಲ್ಲಿ 2011-12ನೇ ಸಾಲಿಗೆ ಆಯುಷ್ ಇಲಾಖೆಯಡಿ ಕೆಳಕಂಡ ಲೆಕ್ಕಶೀರ್ಷಿಕೆಗಳಡಿಯಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿ ಕಛೇರಿ ವೆಚ್ಚಗಳು, ಪ್ರಯಾಣ ಭತ್ಯೆಗಳು, ವಾಹನ ವೆಚ್ಚ ಮತ್ತಿತರ ಅಗತ್ಯ ವೆಚ್ಚಗಳನ್ನು ಪಾವತಿಸಿದ ನಂತರ ಅಂದಾಜು ರೂ. 35.00ಲಕ್ಷಗಳು ಉಳಿತಾಯವಾಗುವ ಸಂಭವವಿರುತ್ತದೆ. ಹಾಗೂ ಈ ಮೊತ್ತದಲ್ಲಿ ಅಗತ್ಯ ವಸ್ತುಗಳನ್ನು ಖರೀದಿಸುವ ಸಲುವಾಗಿ ಈಗಾಗಲೇ ಕ್ರಿಯಾ ಯೋಜನೆ ಅನುಮೋದನೆಗೊಂಡಿರುತ್ತದೆ. ಅಲ್ಲದೆ, ನಿರ್ದೇಶನಾಲಯದಿಂದ ಮತ್ತು ಜಿಲ್ಲಾ ಪಂಚಾಯಿತಿಯಿಂದ ಸೂಚಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುರ್ವೇದ ಆಸ್ಪತ್ರೆಗಳಿಗೆ ಅವಶ್ಯವಿರುವ ವಸ್ತುಗಳನ್ನು ಖರೀದಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಉಳಿತಾಯವಾಗುವ ಅನುದಾನದಲ್ಲಿ ನಿಯಮಾನುಸಾರ ಅಗತ್ಯ ವಸ್ತುಗಳನ್ನು</td>
<td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿ, ಹಾಸನ ಇವರು ಕೋರಿರುವಂತೆ 2011-12ನೇ ಸಾಲಿಗೆ ಆಯುಷ್ ಇಲಾಖೆಯಡಿ ಪ್ರಸ್ತಾವನೆಯಲ್ಲಿ ವಿವರಿಸಿರುವ ಯೋಜನೆಗಳಡಿಯಲ್ಲಿ ಉಳಿತಾಯ ವಾಗುವ ಅನುದಾನದಲ್ಲಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಯುರ್ವೇದ ಆಸ್ಪತ್ರೆಗಳಿಗೆ ಅವಶ್ಯ ವಸ್ತುಗಳನ್ನು ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td>
</tr>
</table>

<table>
<tr>
<td></td>
<td></td>
<td>ಖರೀದಿಸಲು ಅನುಮೋದನೆ ನೀಡುವಂತೆ ವಸ್ತುಗಳ ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>ಪ್ರಸ್ತಾವನೆಯ ವಿವರ ಕೆಳಕಂಡಂತಿವೆ:<br>ರೂ.ಲಕ್ಷಗಳಲ್ಲಿ
<table>
<tr><th>ಕ್ರಸಂ</th><th>ಲೆಕ್ಕಶೀರ್ಷಿಕೆ</th><th>2011–12ನೇ ಸಾಲಿಗೆ ನಿಗದಿಪಡಿಸಿರುವ ಅನುದಾನ</th></tr>
<tr><td>1</td><td>2210–00–101–0–35 (ಯೋಜನೇತರ) (ಭಾವೈಪ & ಹೋ.ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯನುದಾನ)</td><td>8.00</td></tr>
<tr><td>2</td><td>2210–00–101–0–35 (ಯೋಜನೆ) (ಭಾವೈಪ & ಹೋ.ಜಿಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಸಹಾಯನುದಾನ)</td><td>5.00</td></tr>
<tr><td>3</td><td>2210–00–101–0–29 (ಯೋಜನೇತರ) (ಆಯುಷ್ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳನ್ನು ತೆರೆಯುವುದು ಮತ್ತು ನಿರ್ವಹಣೆ)</td><td>26.50</td></tr>
<tr><td>4</td><td>2210–00–101–0–41( (ಯೋಜನೇತರ) (ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ)</td><td>3.75</td></tr>
<tr><td></td><td>ಒಟ್ಟು</td><td>43.25</td></tr>
</table>
ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಹತ್ತಿ ಹಾಸಿಗೆ ಮತ್ತು ದಿಂಬುಗಳನ್ನು ಖರೀದಿಸಲು ಕ್ರಮ ವಹಿಸುವಂತೆ ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ತಿಳಿಸಿದರು.</td>
<td></td>
</tr>
<tr>
<td>5</td>
<td>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಹಳೇಬೀಡು ಮತ್ತು ಅರಸೀಕೆರೆ ತಾ: ಜೆ.ಸಿ.ಪುರ ಪ್ರಾಥಮಿಕ ಸಮುದಾಯ ಆರೋಗ್ಯ ಕೇಂದ್ರ ಗಳಿಗೆ ಕ್ಷಕಿರಣ ಯಂತ್ರಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ.</td>
<td>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, 2011–12ನೇ ಸಾಲಿಗೆ ಕ್ಷ ಕಿರಣ ಯಂತ್ರಗಳ ಯೋಜನೆಯಡಿಯಲ್ಲಿ ರೂ.12.00ಲಕ್ಷಗಳ ಅನುದಾನ ನಿಗದಿಯಾಗಿದ್ದು, ಸದರಿ ಅನುದಾನದಲ್ಲಿ ಬೇಲೂರು ತಾ: ಹಳೇಬೀಡು ಮತ್ತು ಅರಸೀಕೆರೆ ತಾ: ಜೆ.ಸಿ.ಪುರ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಕ್ಷ ಕಿರಣ ಯಂತ್ರಗಳನ್ನು ಖರೀದಿಸಲು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಹಾಕಿರುವ ಮೂರು ಸಂಸ್ಥೆಗಳ ದರಪಟ್ಟಿಯನ್ನು ತೆರದು, ಅವುಗಳಲ್ಲಿ ಕಡಿಮೆ ದರ ನಮೂದಿಸುವ ಸಂಸ್ಥೆಯಿಂದ ಕ್ಷ ಕಿರಣ ಯಂತ್ರಗಳನ್ನು ಖರೀದಿಸಲು ಅನುಮೋದನೆಯನ್ನು ನೀಡುವಂತೆ ಸಭೆಯಲ್ಲಿ ಕೋರಿದರು.</td>
<td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಕೋರಿರುವಂತೆ 2011–12ನೇ ಸಾಲಿಗೆ ಕ್ಷ ಕಿರಣ ಯಂತ್ರಗಳ ಖರೀದಿ ಯೋಜನೆಯಡಿ ನಿಗದಿಪಡಿಸಿರುವ ರೂ.12.00ಲಕ್ಷಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮಗಳ ಪ್ರಕಾರ ಟೆಂಡರ್‌ನಲ್ಲಿ ಭಾಗವಹಿಸಿರುವ ಮೂರು ಸಂಸ್ಥೆಗಳ ದರಪಟ್ಟಿಯನ್ನು ತೆರೆಯಲು ಮತ್ತು ಕಡಿಮೆ ದರ ನಮೂದಿಸುವ ಸಂಸ್ಥೆಯಿಂದ ಎರಡು ಕ್ಷಕಿರಣ ಯಂತ್ರಗಳನ್ನು ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಮತ್ತು ಅವುಗಳನ್ನು ಬೇಲೂರು ತಾ: ಹಳೇಬೀಡು ಹಾಗೂ</td>
</tr>
</table>

| | | | |
|---|---|---|---|
| | | | ಅರಸೀಕೆರೆ ತಾ: ಜೆ.ಸಿ.ಪುರ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅಳವಡಿಸಲು ತೀರ್ಮಾನಿಸಲಾಯಿತು. |
| 6 | 2011-12ನೇ ಸಾಲಿಗೆ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಆಸ್ಪತ್ರೆಗಳಲ್ಲಿನ ವಿವಿಧ ಸಲಕರಣೆಗಳನ್ನು ದುರಸ್ಥಿಪಡಿಸಲು ಕರೆದಿರುವ ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, 2011-12ನೇ ಸಾಲಿಗೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರ/ ಪ್ರಾಥಮಿಕ ಆರೋಗ್ಯ ಘಟಕ/ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ವಿವಿಧ ಸಲಕರಣೆಗಳನ್ನು ದುರಸ್ಥಿಪಡಿಸಲು ರೂ.3.00ಲಕ್ಷಗಳ ಅನುದಾನ ನಿಗದಿಯಾಗಿದ್ದು, ಸದರಿ ಅನುದಾನದಲ್ಲಿ ಸಲಕರಣೆಗಳನ್ನು ದುರಸ್ಥಿಪಡಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಹಾಕಿರುವ ಎಲ್ಲಾ ಸಂಸ್ಥೆಗಳ ದರಪಟ್ಟಿಯನ್ನು ತೆರದು, ಅವುಗಳಲ್ಲಿ ಕಡಿಮೆ ದರ ನಮೂದಿಸುವ ಸಂಸ್ಥೆಯಿಂದ ಸಲಕರಣೆಗಳನ್ನು ದುರಸ್ಥಿಪಡಿಸಲು ಅನುಮೋದನೆಯನ್ನು ನೀಡುವಂತೆ ಸಭೆಯಲ್ಲಿ ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಕೋರಿರುವಂತೆ 2011-12ನೇ ಸಾಲಿಗೆ ಸಲಕರಣೆಗಳ ದುರಸ್ಥಿಗಾಗಿ ನಿಗದಿಪಡಿಸಿರುವ ರೂ.3.00ಲಕ್ಷ ಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮಗಳ ಪ್ರಕಾರ ಟೆಂಡರ್‌ನಲ್ಲಿ ಭಾಗವಹಿಸಿರುವ ಸಂಸ್ಥೆಗಳಲ್ಲಿ ಕಡಿಮೆ ದರ ನಮೂದಿಸುವ ಸಂಸ್ಥೆಯಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರ ಅಧೀನದಲ್ಲಿ ಬರುವ ಪ್ರಾಥಮಿಕ ಆರೋಗ್ಯ ಘಟಕ/ ಪ್ರಾಥಮಿಕ ಆರೋಗ್ಯ ಕೇಂದ್ರ/ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ವಿವಿಧ ಸಲಕರಣೆಗಳನ್ನು ದುರಸ್ಥಿಪಡಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | | **ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ:**<br>ಪೈಕಾ ವತಿಯಿಂದ ಅನುಷ್ಠಾನ ಮಾಡುವ ಆಟದ ಮೈದಾನಗಳ ಕಾಮಗಾರಿಗಳನ್ನು ಪರಿಶೀಲನೆ ನಡೆಸಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರು ಸಹಾಯಕ ನಿರ್ದೇಶಕರಿಗೆ ತಿಳಿಸಿದರು.<br>ಸಹಾಯಕ ನಿರ್ದೇಶಕರು ಮಾತನಾಡುತ್ತಾ, ಜಿಲ್ಲಾ ಪಂಚಾಯಿತಿ ಸದಸ್ಯರ ಗಮನಕ್ಕೆ ತಂದು ಆಟದ ಮೈದಾನಗಳನ್ನು ಅನುಷ್ಠಾನ ಮಾಡುವಂತೆ ಈಗಾಗಲೇ ಗ್ರಾಮ ಪಂಚಾಯಿತಿಗಳಿಗೆ ಪತ್ರ ಬರೆದು ತಿಳಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಮಂಜಮ್ಮ ಹೆಚ್.ಬಿ ರವರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕು ಕ್ರೀಡಾಂಗಣ ಮಳೆಯಿಂದ ತುಂಬಾ ಹದಗೆಟ್ಟಿದ್ದು, ಯಾರೂ ಕ್ರೀಡಾಂಗಣಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಎಂ.ವಿ.ಹೇಮಾವತಿ ಮಂಜುನಾಥ್‌ರವರು ಮಾತನಾಡುತ್ತಾ, ಹಗರೆ ಕ್ರೀಡಾಂಗಣದಲ್ಲಿ ದಸರಾ ಕ್ರೀಡೆಗಳು ನಡೆಯುತ್ತಿವೆ. ಆದ್ದರಿಂದ | ಸಭೆಯಲ್ಲಿ ಚರ್ಚಿಸಿದಂತೆ, ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಹಾಸನ ಇವರು ಕೋರಿರುವಂತೆ ಹಾಸನ ನಗರದಲ್ಲಿ ನಡೆಯುತ್ತಿರುವ ಕ್ರೀಡಾ ವಸತಿ ಶಾಲೆಯಲ್ಲಿರುವ ವಿದ್ಯಾರ್ಥಿಗಳಿಗೆ ಅವಶ್ಯ ಸಮವಸ್ತ್ರ ಮತ್ತು ಕ್ರೀಡಾ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸ ಲಾಯಿತು. |

ಹಗರೆಯಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸಬೇಕೆಂದು ಕೋರಿದರು.

ಸಹಾಯಕ ನಿರ್ದೇಶಕರು ಮಾತನಾಡುತ್ತಾ, ಹಾಸನ ನಗರದಲ್ಲಿ ನಡೆಯುತ್ತಿರುವ ಕ್ರೀಡಾ ಶಾಲೆಯಲ್ಲಿರುವ ಮಕ್ಕಳಿಗೆ ಅವಶ್ಯ ಸಮವಸ್ತ್ರ ಮತ್ತು ಕ್ರೀಡಾ ಸಾಮಗ್ರಿಗಳನ್ನು ಖರೀದಿಸಬೇಕಾಗಿದ್ದು, ಸಮಿತಿಯು ಅನುಮೋದನೆ ನೀಡಬೇಕೆಂದು ಕೋರಿದರು.

**ವಯಸ್ಕರ ಶಿಕ್ಷಣ ಇಲಾಖೆ:**

ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಕಲಿಕಾ ಕೇಂದ್ರಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಜಿಲ್ಲಾ ಪಂಚಾಯಿತಿ ಸದಸ್ಯರ ಗಮನಕ್ಕೆ ತರಬೇಕೆಂದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಯವರಿಗೆ ತಿಳಿಸಿದರು.

ಕಲಿಕಾ ಕೇಂದ್ರಗಳು ನಡೆಯುತ್ತಿರುವ ಗ್ರಾಮಗಳಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಸ್ಥಳೀಯ ಶಿಕ್ಷಕರುಗಳಿಗೆ ನಿರ್ದೇಶನವನ್ನು ನೀಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮ ವಹಿಸುವಂತೆ ತಿಳಿಸಿದರು.

**ಅಕ್ಷರ ದಾಸೋಹ:**

ಉಪ ಕಾರ್ಯದರ್ಶಿಯವರು ಮಾತನಾಡುತ್ತಾ, ಆಹಾರ ಪದಾರ್ಥಗಳ ಸಾಗಾಣಿಕೆಗೆ ಸಂಬಂಧಿಸಿದಂತೆ, ಟೆಂಡರ್ ಬಗ್ಗೆ ಸಮಿತಿಯ ಗಮನಕ್ಕೆ ತಂದು ಅನುಮೋದನೆಯನ್ನು ಪಡೆಯಲು ಕ್ರಮ ವಹಿಸುವಂತೆ ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಇವರಿಗೆ ತಿಳಿಸಿದರು.

**ಸರ್ವ ಶಿಕ್ಷಣ ಅಭಿಯಾನ:**

ಮಾನ್ಯ ಸದಸ್ಯರಾದ ಶ್ರೀಮತಿ ಹೆಚ್.ಬಿ.ಮಂಜಮ್ಮರವರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕಿನಲ್ಲಿ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರುಗಳನ್ನು ನೇಮಕ ಮಾಡಿಕೊಂಡಿದ್ದು, ಅವರಿಗೆ ಎರಡೂವರೆ ತಿಂಗಳ ವೇತನವನ್ನು ನೀಡಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ಶಿಕ್ಷಕರುಗಳಿಗೆ ವೇತನವನ್ನು ನೀಡಲು ಕ್ರಮ ವಹಿಸಬೇಕೆಂದು ಕೋರಿದರು.

ಉಪ ಕಾರ್ಯದರ್ಶಿ (ಆಡಳಿತ)ರವರು ಮಾತನಾಡುತ್ತಾ, ಸಾರ್ವಜನಿಕ ಶಿಕ್ಷಣ ಇಲಾಖೆಯಡಿ ಕಟ್ಟಡ ದುರಸ್ತಿ ಯೋಜನೆಯಡಿ ಕಟ್ಟಡಗಳ ಪಟ್ಟಿಯನ್ನು ಪಡೆದು ಜಿಲ್ಲಾ ಪಂಚಾಯತ್ ಸದಸ್ಯರ ಗಮನಕ್ಕೆ ತಂದು ಸಮರ್ಪಕವಾಗಿ ದುರಸ್ಥಿ ಪಡಿಸುವ ಬಗ್ಗೆ ಕ್ರಮ ವಹಿಸಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ತಿಳಿಸಬೇಕೆಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ತಿಳಿಸಲಾಯಿತು.

ಮುಂದುವರೆದು, ಸಾಧನ ಸಲಕರಣೆ ಯೋಜನೆಯಡಿಯಲ್ಲಿ ಶಾಲೆಗಳಿಗೆ ಅವಶ್ಯವಿರುವ ಡೆಸ್ಕ್ ಬೆಂಚ್ ಮುಂತಾದ ಸಾಧನ ಸಲಕರಣೆಗಳನ್ನು ಹಿಂದಿನ ಸಾಲಿನಲ್ಲಿ ಸರಬರಾಜು

ಮಾಡಿದ ಶಾಲೆಗಳನ್ನು ಹೊರತುಪಡಿಸಿ ಇತರೆ ಶಾಲೆಗಳಿಂದ ಬೇಡಿಕೆಯನ್ನು ಪಡೆದು ಉತ್ತಮ ಗುಣಮಟ್ಟದಲ್ಲಿ ಸರಬರಾಜು ಮಾಡಲು ಟೆಂಡರ್ ಕರೆದು ನಿಯಮಾನುಸಾರ ಕ್ರಮ ವಹಿಸುವಂತೆ ತಿಳಿಸಿದರು.

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕಿನಲ್ಲಿ ಬುದ್ಧಿಮಾಂದ್ಯ ಮಕ್ಕಳು ಮತ್ತು ಅಂಗವಿಕಲ ಮಕ್ಕಳಿಗೆ ಶಾಲೆ ನಡೆಯುತ್ತಿದ್ದು, ಜಿಲ್ಲಾ ಕೇಂದ್ರಕ್ಕೆ ಬಂದು ದೃಡೀಕರಣ ಪತ್ರವನ್ನು ಪಡೆಯಲು ತೊಂದರೆಯಾಗುತ್ತಿದೆ. ಆದ್ದರಿಂದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿ ವೈದ್ಯಾಧಿಕಾರಿಗಳನ್ನು ಸಕಲೇಶಪುರಕ್ಕೆ ಕಳುಹಿಸಿ ಸರ್ಟಿಫಿಕೇಟ್ ನೀಡಲು ಕ್ರಮ ವಹಿಸಬೇಕೆಂದು ಕೋರಿದರು.

ಜಿಲ್ಲಾ ಆರೋಗ್ಯ ಮತ್ತುಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಜಿಲ್ಲಾ ಶಸ್ತ್ರ ಚಿಕಿತ್ಸಕರು ಮಕ್ಕಳನ್ನು ಪರೀಕ್ಷಿಸಿದ ನಂತರವಷ್ಟೇ ಸರ್ಟಿಫಿಕೇಟ್ ನೀಡಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿರುತ್ತಾರೆ. ಸಕಲೇಶಪುರದಲ್ಲಿ ನಡೆಯುತ್ತಿರುವ ಬುದ್ಧಿಮಾಂದ್ಯ ಮತ್ತು ಅಂಗವಿಕಲ ಮಕ್ಕಳನ್ನು ಪರೀಕ್ಷಿಸಿ ಸರ್ಟಿಫಿಕೇಟ್ ನೀಡಲು ಕ್ರಮ ವಹಿಸುವುದಾಗಿ ಸಭೆಗೆ ವಿವರ ನೀಡಿದರು.

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:**

ಮಾನ್ಯ ಸದಸ್ಯರಾದ ಶ್ರೀಮತಿ ಎಂ.ವಿ.ಹೇಮಾವತಿ ಮಂಜುನಾಥ್ ರವರು ಮಾತನಾಡುತ್ತಾ, ಹಗರೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸುತ್ತಮುತ್ತ ಗಿಡಗಳು ಬೆಳೆದಿದ್ದು, ಸ್ವಚ್ಚತೆಯಿರುವುದಿಲ್ಲ. ಆದ್ದರಿಂದ, ಗಿಡಗಳನ್ನು ತೆಗೆಸಿ ಸ್ವಚ್ಚಗೊಳಿಸಲು ಕ್ರಮ ವಹಿಸಬೇಕೆಂದು ಕೋರಿದರು.

ಮುಂದುವರೆದು, ಅಪ್ಪಿಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಎ.ಎನ್.ಎಂ ಅವರು ದೀರ್ಘಕಾಲ ಅನಧಿಕೃತವಾಗಿ ಗೈರುಹಾಜರಾಗಿದ್ದು, ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಆದ್ದರಿಂದ, ಎ.ಎನ್.ಎಂ. ಅರವನ್ನು ಬದಲಾಯಿಸುವ ಬಗ್ಗೆಯೂ ಸಹ ಕ್ರಮ ವಹಿಸಬೇಕೆಂದು ಕೋರಿದರು.

ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ದೀರ್ಘಕಾಲ ಅನಧಿಕೃತವಾಗಿ ಗೈರಾಜರಾದ ಸಿಬ್ಬಂದಿ ವರ್ಗದವರ ಮೇಲೆ ಪತ್ರಿಕಾ ಪ್ರಕಟಣೆಯನ್ನು ನೀಡಿ ಶಿಸ್ತುಕ್ರಮ ಜರುಗಿಸಬೇಕೆಂದು ಜಿಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

| | | | |
|---|---|---|---|
| | | ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಸಕಲೇಶಪುರ ಮತ್ತು ಅರಸೀಕೆರೆ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಟಿ.ವಿ. ಡಿ.ವಿ.ಡಿ ಮತ್ತು ಸೋಲಾರ್ ವಾಟರ್ ಹೀಟರ್‌ಗಳನ್ನು ಸರಬರಾಜು ಮಾಡಿರುವ ಬಗ್ಗೆ ಪೂರ್ಣ ವಿವರಗಳನ್ನು ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.<br>ಮುಂದುವರೆದು, ಕಾಲಾವಧಿ ಮುಕ್ತಾಯವಾಗಿರುವ ಔಷಧಿಗಳನ್ನು ರೋಗಿಗಳಿಗೆ ನೀಡುತ್ತಿರುವುದು ಕಂಡುಬಂದಿದೆ. ಅಲ್ಲದೆ, ಅಂತಹ ಔಷಧಿಗಳನ್ನು ಗುಂಡಿ ತೆಗೆದು ಮುಚ್ಚಿಹಾಕುತ್ತಿದ್ದಾರೆ. ಆದ್ದರಿಂದ, ಔಷಧಿಗಳ ಕಾಲಾವಧಿ ಮುಗಿಯುವ 3 ತಿಂಗಳ ಮುಂಚಿತವಾಗಿ ಔಷಧಿಗಳ ಪೂರ್ಣ ಮಾಹಿತಿಯನ್ನು ನೀಡುವಂತೆ ವೈದ್ಯಾದಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ದೇವಿಕ ರವರು ಮಾತನಾಡುತ್ತಾ, ಆರೋಗ್ಯ ರಕ್ಷಾ ಸಮಿತಿಗೆ ಜಿಲ್ಲಾ ಪಂಚಾಯತ್ ಸದಸ್ಯರಿಗೆ ತಿಳಿಸಿರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಎಂ.ವಿ.ಹೇಮಾವತಿ ಮಂಜುನಾಥ್ ರವರು ಮಾತನಾಡುತ್ತ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇಂಜಕ್ಷನ್ ನೀಡಲು ಸಿರಿಂಜ್ ಇಲ್ಲದೆ ತೊಂದರೆಯಾಗಿರುತ್ತದೆ. ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಮಾತನಾಡುತ್ತಾ, ಸಿರಿಂಜ್‌ಗಳು ಸರಬರಾಜಾಗಿರುವುದಿಲ್ಲ. ಆದ್ದರಿಂದ, ಆಸ್ಪತ್ರೆಯಲ್ಲಿರುವ ರಿಜರ್ವ್ ಫಂಡ್‌ನಲ್ಲಿ ಅವಶ್ಯ ಸಿರಿಂಜ್‌ಗಳನ್ನು ಖರೀದಿಸಲು ಕೇಂದ್ರ ಕಛೇರಿಯಿಂದ ನಿರ್ದೇಶನವಿರುತ್ತದೆ ಎಂದು ಸಭೆಗೆ ವಿವರ ನೀಡಿದರು.<br>ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಪ್ರಚಾರವನ್ನು ನೀಡಲು ಕ್ಷೇತ್ರ ಶಿಕ್ಷಣಾಧಿಕಾರಿಯವರು ಕ್ರಮ ವಹಿಸಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರು ತಿಳಿಸಿದರು. | |
| | | ಮತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ಬಿ.ಆರ್.ಸತ್ಯನಾರಾಯಣ) 10/10/2011
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ